ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.
ದಿನಾಂಕ: 20-09-2024.

<u>ಪಾಟೀಸವಾಲು:</u> ವಾದಿಗಳ ಪರ ಶ್ರೀ ಕೆ.ಆರ್.ಎನ್. ವಕೀಲರಿಂದ:-

ನನ್ನ ಅಜ್ಜನ ಹೆಸರು ಸೋಮಯ್ಯ ಈರಾ ಯಾನೆ ಬೋಳಾ ನಾಯ್ಕ ಎಂದು ಇರುತ್ತದೆ. ನನ್ನ ಅಜ್ಜನ ತಮ್ಮನ ಹೆಸರು ದುರ್ಗಪ್ಪ ಈರಾ ಬೋಳಾ ನಾಯ್ಕ ಇರುತ್ತದೆ. ನನ್ನ ಅಜ್ಜನ ಹೆಸರು ಸೋಮಯ್ಯ ಎಂದರೆ ಸರಿ. ನನ್ನ ಅಜ್ಜ ಸೋಮಯ್ಯ ಮತ್ತು ದುರ್ಗಪ್ಪ ಮತ್ತು ಅವರ ತಂದೆ ಈರಾ ರವರ ನಡುವೆ ಆಸ್ತಿಯಲ್ಲಿ ಪಾಲು ಆದ ಬಗ್ಗೆ ನನಗ ಗೊತ್ತಿಲ್ಲ. ನನ್ನ ಅಜ್ಜ ಸೋಮಯ್ಯ ಮತ್ತು ದುರ್ಗಪ್ಪನ ರವರ ನಡುವೆ ಆಸ್ತಿಯಲ್ಲಿ ಪಾಲು ಆಗಿತ್ತು ಎಂದು ತೋರಿಸಲು ನಮ್ಮ ಬಳಿ ದಾಖಲೆಗಳು ಇರುತ್ತವೆ. ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸದರಿಯವರ ನಡುವೆ ಆಸ್ತಿಯಲ್ಲಿ ಪಾಲು ಮೌಖಿಕವಾಗಿ, ಲಿಖಿತವಾಗಿ ಅಥವಾ ನೋಂದಾಯಿತ ದಾಖಲೆಗಳ ಮೂಲಕ ಆಗಿತ್ತೋ, ಅಥವಾ ಹೇಗೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬರವಣಿಗೆಯ ಮೂಲಕ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಬರವಣಿಗೆಯಲ್ಲಿ ಪಾಲು ಆಗಿದೆ ಎಂದು ಹೇಳಿದ ದಾಖಲೆಯನ್ನು ನಾನು ಯಾವಾಗ ನೋಡಿದ್ದೇನೆ ಎಂದು ಗೊತ್ತಿಲ್ಲ. ನಾನು 2ನೇ ಪಿ.ಯು.ಸಿ. ವರೆಗೆ ಓದಿರುತ್ತೇನೆ. ನನ್ನ ಮುತ್ತಜ್ಜನ ಆಸ್ತಿ ಎಷ್ಟು ಇತ್ತು ಮತ್ತು ಅದರ ಸರ್ವೆ ನಂಬರು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿ ನನ್ನ ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. ನಮ್ಮ ಮುತ್ತಜ್ಜನ ಕಾಲದಿಂದ ಬಂದ ಆಸ್ತಿಗಳ ವಿವರವನ್ನು ನಮ್ಮ ವಕೀಲರಿಗೆ ಹೇಳಿ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ, ಆದರೆ ಅದರ ಸರ್ವೆ ನಂಬರು ನನಗೆ ಗೊತ್ತಿರುವುದಿಲ್ಲ. ಆದರೆ ಈ ಪ್ರಕರಣಗಳ ದಾವಾಸ್ತಿಗಳ ಸರ್ವೆ ನಂಬರು ನನಗೆ ಗೊತ್ತಿರುತ್ತದೆ. ದಾವಾಸ್ತಿಗಳಾದ 'ಅ', 'ಬ', 'ಕ' ಪರಿಶಿಷ್ಟಗಳ ವಿವರ ನನಗೆ ಗೊತ್ತಿರುತ್ತದೆ.

ನನ್ನ ಅಜ್ಜ ಮತ್ತು ಆತನ ಸಹೋದರ ಆಸ್ತಿ ಖರೀದಿ ಮಾಡಿದ ಬಗ್ಗೆ ಕ್ರಯ ಪತ್ರ ಇರುವುದಿಲ್ಲ. ನನ್ನ ಮುತ್ತಜ್ಜ ಖರೀದಿ ಮಾಡಿದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾಸ್ತಿಗಳನ್ನು ಹೊರತುಪಡಿಸಿ, ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ. ಸೋಮಯ್ಯನ ಮಕ್ಕಳು ಮತ್ತು ದುರ್ಗಪ್ಪನ ಮಕ್ಕಳ ಅಂದರೆ ವಾದಿ, ಪ್ರತಿವಾದಿಗಳ ನಡುವೆ ದಾವಾಸ್ತಿಗಳಲ್ಲಿ ಪಾಲು ಆಗಿಲ್ಲ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

ಎಲ್ಲಾ ದಾವಾಸ್ತಿಗಳು ನನ್ನ ಅಜ್ಜ ಸೋಮಯ್ಯ ಮತ್ತು ದುರ್ಗಪ್ಪ ರವರಿಂದ ಬಂದ ಆಸ್ತಿ ಇರುತ್ತದೆ. ಸದರಿ ಆಸ್ತಿಗಳು ಸದರಿಯವರಿಗೆ ಗೇಣಿ ನಾತೆಯಿಂದ ಬಂದಿರುತ್ತವೆ. ಅವು ಯಾವ ವರ್ಷ ಮಂಜೂರು ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ವಾದಿಯವರ ತಂದೆ ಹೆಸರಿಗೆ ಮತ್ತು ದುರ್ಗಪ್ಪನ ಹೆಸರಿಗೆ ದಾವಾಸ್ತಿಗಳು ಮಂಜೂರು ಆಗುವ ಸಮಯದಲ್ಲಿ ಒಟ್ಟು ಕುಟುಂಬದಲ್ಲಿ ಇದ್ದರಾ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಯಾವ ವರ್ಷ ಮಂಜೂರಾಗಿದೆ ಎಂದು ದಾಖಲೆಗಳನ್ನು ನೋಡಿದ್ದೇನೆ, ಆದರೆ ಯಾವ ವರ್ಷ ಮಂಜೂರಾಗಿದೆ ಎಂದು ನನಗೆ ನೆನಪಿಲ್ಲ. ದಾವಾಸ್ತಿಗಳಲ್ಲಿ ಅಜ್ಜ ಸೋಮಯ್ಯ ಮತ್ತು ದುರ್ಗಪ್ಪ ರವರ ನಡುವೆ ಯಾವತ್ತೂ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗವನ್ನು ಸದರಿಯವರು ನಕ್ಷೆಯ ಮೂಲಕ ಮಾಡಿಕೊಂಡಿರುತ್ತಾರೆ. ಅಜ್ಜ ಸೋಮಯ್ಯ ಮತ್ತು ದುರ್ಗಪ್ಪ ನಕ್ಷೆಯಿಂದ ಮಾಡಿಕೊಂಡ ವಿಭಾಗದ ಆಸ್ತಿಯ ಚತುರ್ಗಡಿ ನನಗೆ ಹೇಳಲು ಬರುವುದಿಲ್ಲ. ಸದರಿಯವರು 2 ಎಕರೆ 10 ಗುಂಟೆ ಜಮೀನಿನಲ್ಲಿ ಇಬ್ಬರೂ ಅರ್ಧ ಹಿಸ್ಸೆ ಮಾಡಿಕೊಂಡಿರುತ್ತಾರೆ. ಸದರಿಯವರಿಗೆ ಯಾವ ದಿಕ್ಕಿಗೆ ಹಿಸ್ಸೆ ಮಾಡಿಕೊಡಲಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸರಿದಯವರು ಬಾಯಿ ಮಾತಿನಿಂದ ಹಿಸ್ಸೆ ಮಾಡಿಕೊಂಡಿರುವುದನ್ನು ಹೊರತುಪಡಿಸಿ, ಬೇರೆ ಯಾವ ದಾಖಲೆ ನನ್ನ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಮ್ಮ ಬಳಿ ಯಾವ ದಾಖಲೆ ಇದೆ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ ನನಗೆ ಸರಿಯಾಗಿ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿಯವರ ನಡುವೆ ವಿಭಾಗವಾದ ದಾಖಲೆಯನ್ನು ಈಗ 2-3 ವರ್ಷಗಳ ಹಿಂದೆ ನೋಡಿದ್ದೆನು. ಸದರಿ ದಾಖಲೆಗಳು ಸರಕಾರಿ ತಾಬೆಯಲ್ಲಿರಬಹುದು. ಸದರಿ ದಾಖಲೆಗಳು ಉಪನೋಂದಾಯಿತ ಕಚೇರಿಯಲ್ಲಿರಬಹುದು. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಲಾಗಿ, ಸಾಕ್ಷಿ ಅವುಗಳನ್ನು ನೋಡಿ, ಸದರಿ ದಾಖಲೆಗಳಲ್ಲಿ ನಿಡಿ-1 ಇದೆ ಎಂದು ತೋರಿಸಿರುತ್ತಾರೆ. ನಿಡಿ-1 ಪಾಲು ಪಟ್ಟಿ ದಾಖಲೆ ಇರುವುದಿಲ್ಲ, ಅದು ಭೂನ್ಯಾಯ ಮಂಡಳಿ ಆದೇಶ ಪ್ರತಿ ಇರುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕೋರಿದ್ದರಿಂದ, ವಿನಂತಿ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**